ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

**ಸಿ.ಸಿ.ನಂಃ 1057/24**

ಪಿಡಬ್ಲ್ಯುಃ – 1

ಸಿಡಬ್ಲ್ಯುಃ – 1

ದಿನಾಂಕಃ 02.05.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | – ಪ್ರಿಯಂವದಾ |
| ಗಂಡನ ಹೆಸರು | – ನಿಶಾಂತ್ ಪ್ರಸನ್ನನ್ |
| ವಯಸ್ಸು | – 43 ವರ್ಷ |
| ವೃತ್ತಿ | – ಗೃಹಿಣಿ |
| ವಾಸಸ್ಥಳ | – ಕಡಗದಾಳು ಗ್ರಾಮ |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ–

ಚಾಸಾ–2 ರಿಂದ 7 ನನಗೆ ಗೊತ್ತು. ಆರೋಪಿ ಗೊತ್ತು. ಈಗ್ಗೆ ಸುಮಾರು 3 ವರ್ಷಗಳ ಹಿಂದೆ ನಮ್ಮ ಮನೆಯಲ್ಲಿ ಕಿರ್ಲೋಸ್ಕರ್ ಕಂಪನಿಯ ಜನರೇಟರನ್ನು ಬದಲಾಯಿಸಿ ಕೊಡುವ ವಿಚಾರವಾಗಿ ಆರೋಪಿಗೂ ಮತ್ತು ನನಗೂ ಹಣದ ವ್ಯವಹಾರದಲ್ಲಿ ವ್ಯತ್ಯಾಸವಾಗಿದ್ದು, ಈ ಸಂಬಂಧ ನನ್ನ ಮತ್ತು ಆರೋಪಿ ನಡುವೆ ಮಾತುಕತೆ ಆಗಿದ್ದು, ಅದನ್ನು ಬಗೆಹರಿಸಿಕೊಳ್ಳಲು ನಾವು ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ಒಂದು ದಾಖಲೆಗೆ ನನ್ನ ಸಹಿ ಪಡೆದಿರುತ್ತಾರೆ. ಇದರ ಹೊರತಾಗಿ ಆರೋಪಿ ನನಗೆ ವ್ಯಾವಹಾರಿಕವಾಗಿ ಮೋಸ ಮಾಡಿಲ್ಲ, ಬೇರೆಯವರ ಹೆಸರು ಹೇಳಿ ನನಗೆ ದೂರವಾಣಿ ಕರೆ ಮಾಡಿ ನನ್ನಿಂದ ಹಣ ಪಡೆದುಕೊಂಡಿಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ದೂರಾಗಿದ್ದು , ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ–1 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ನಿಪಿ–1 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

ಪಾಟೀ ಸವಾಲು ಮಾನ್ಯ ಸರಕಾರಿ ಅಭಿಯೋಜಕರಿಂದಃ-

ದಿಃ 04.06.2023 ರಂದು ಮಃ 12.00 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿ ಇರುವಾಗ ಆರೋಪಿಯು ತನ್ನ ಹೆಸರು ಸಾಗರ್ ಎಂಬುದಾಗಿ ತಿಳಿಸಿ ನಾನು ನಿಮ್ಮ ಮನೆಯಲ್ಲಿ ಮೂರು ವರ್ಷಗಳ ಹಿಂದೆ ಕಿರ್ಲೋಸ್ಕರ್ ಕಂಪನಿಯ 3 ಕೆ ವಿ ಜನರೇಟರನ್ನು ರಿಪೇರಿ ಮಾಡಿದ್ದು, ಅದನ್ನು ನಿಮ್ಮಿಂದ ಪಡೆದು ನಾನು 5 ಕೆ ವಿ ಜನರೇಟರನ್ನು ನಿಮ್ಮ ಮನೆಯಲ್ಲಿ ಸ್ಥಾಪನೆ ಮಾಡುತ್ತೇನೆ ಎಂದು ಹೇಳಿ ನನ್ನಿಂದ ರೂ.22,000/- ಯನ್ನು ಗೂಗಲ್ ಪೇ ಮುಖಾಂತರ ಲಕ್ಷ್ಮಿ ಆಚಾರ್ಯ ಎಂಬುವವರ ಅಕೌಂಟಿಗೆ ಹಣ ಹಾಕಿಸಿಕೊಂಡಿದ್ದು, ತದನಂತರ ಆರೋಪಿ ನನಗೆ ಮೇಲೆ ಹೇಳಿದ 5 ಕೆ ವಿ ಜನರೇಟರನ್ನು ಹಾಕಿ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಈ ಸಂಬಂಧ ನಾನು ನಿಪಿ-1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಆರೋಪಿ ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ರಾಜಿ ಮಾಡಿಕೊಂಡಿರುವ ಕಾರಣ ಆರೋಪಿ ಪರ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

ಪಾಟೀ ಸವಾಲುಃ - ಆರೋಪಿ ಪರ ವಕೀಲರಿಂದ ಏನು ಇಲ್ಲ.
ಮರು ವಿಚಾರಣೆಃ - ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ, ಮಡಿಕೇರಿ.